# National
# Kannada
# 01.06.2025 1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಭಾರತ-ಮಂಗೋಲಿಯಾ ಜಂಟಿ ಸಮರಾಭ್ಯಾಸ 'ನೊಮಾಡಿಕ್ ಎಲಿಫೆಂಟ್' - ೧೭ನೇ ಆವೃತ್ತಿಗೆ ಉಲಾನ್ ಬಾಟರ್‌ನಲ್ಲಿ ಚಾಲನೆ

೨. ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆ ವಿರುದ್ಧ ಅರಿವು ಮೂಡಿಸುತ್ತಿರುವ ಭಾರತ ಸರ್ವಪಕ್ಷ ನಿಯೋಗ

೩. ಭಯೋತ್ಪಾದಕರ ಬೆದರಿಕೆಯಿಂದ ವಿಚಲಿತರಾಗದೆ, ಕಾಶ್ಮೀರದ 'ಮಾತಾ ಖೀರ್ ಭವಾನಿ ಮೇಳಕ್ಕೆ' ಆಗಮಿಸುತ್ತಿರುವ ಭಕ್ತ ಸಮೂಹ

೪. ಐಪಿಎಲ್ ಕ್ರಿಕೆಟ್ ಲ್ ಕ್ರಿಕೆಟ್ ಟಿ-೨೦ ಕ್ರಿಕೆಸ್ ಪಕ್ಷದ ; ೨ನೇ ಕ್ವಾಲಿಫೈಯರ್ ಪಂದ್ಯದಲ್ಲಿಂದು ಮುಂಬೈ ಇಂಡಿಯನ್ಸ್ -ಪಂಜಾಬ್ ಕಿಂಗ್ಸ್ ಹಣಾಹಣಿ

***************

ಭಾರತ ಮತ್ತು ಮಂಗೋಲಿಯಾ ರಾಷ್ಟ್ರಗಳ ನಡುವಿನ ೧೭ನೇ ಆವೃತ್ತಿಯ ಜಂಟಿ ಸಮರಾಭ್ಯಾಸ 'ನೊಮಾಡಿಕ್ ಎಲಿಫೆಂಟ್' ಮಂಗೋಲಿಯಾದ ಉಲಾನ್ ಬಾಟರ್‌ನ ವಿಶೇಷ ಪಡೆಯ ತರಬೇತಿ ಕೇಂದ್ರದಲ್ಲಿ ಪ್ರಾರಂಭವಾಗಿದೆ. ಈ ಸಮರಾಭ್ಯಾಸ ಇದೇ ೧೩ರವರೆಗೆ ನಡೆಯಲಿದೆ. ಈ ಅಭ್ಯಾಸದಲ್ಲಿ, ಉಭಯ ದೇಶಗಳ ನಡುವಿನ ಬಲವರ್ಧಿತ ರಕ್ಷಣಾ ಸಹಕಾರವನ್ನು ಪ್ರತಿಬಿಂಬಿಸುವ ವಿವಿಧ ತರಬೇತಿ ಚಟುವಟಿಕೆಗಳು ಜರುಗಲಿವೆ.ಆರಂಭಿಕ ಸಮಾರಂಭದಲ್ಲಿ ಉಪಸ್ಥಿತರಿದ್ದ ಭಾರತದ ಮಂಗೋಲಿಯಾದ ರಾಯಭಾರಿ ಅತುಲ್ ಮಾಳಹಾರಿ ಗೊಟ್ಸುರ್ವೆ ಮತ್ತು ಮಂಗೋಲಿಯಾದ ಮೇಜರ್ ಜನರಲ್ ಲ್ಖಾಗ್ವಾಸುರೆನ್ ಗಂಸೆಲೆಮ್ ಸೈನಿಕರಿಗೆ ಶುಭ ಹಾರೈಸಿದರು. ಈ ಅಭ್ಯಾಸವು ಉಭಯ ರಾಷ್ಟ್ರಗಳ ಸೇನೆಗಳ ನಡುವಿನ ಸಹಕಾರ ಮತ್ತು ಪರಸ್ಪರ ಅರ್ಥೈಸಿಕೊಳ್ಳುವಿಕೆ ಹೆಚ್ಚಿಸುತ್ತವೆ ಹಾಗೂ ಕಾರ್ಯಾಚರಣಾ ಸಿದ್ಧತೆಯನ್ನೂ ಬಲಪಡಿಸುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.ಅಭ್ಯಾಸದ ಪ್ರಮುಖ ಭಾಗವಾಗಿ, ಅರೆಪರ್ವತ ಪ್ರದೇಶದಲ್ಲಿ ಉಗ್ರವಾದ ವಿರುದ್ಧದ ಕಾರ್ಯಾಚರಣೆಗಳನ್ನು ನಡೆಸಲಾಗುತ್ತವೆ. ಈ ಭಾಗದಲ್ಲಿ ನಡೆಯುವ ತರಬೇತಿ ಇಂದಿನ ಭದ್ರತಾ ಸನ್ನಿವೇಶದಲ್ಲಿ ಮಹತ್ವಪೂರ್ಣವಾಗಿದೆ.

***************

ಭಾರತದ ಸರ್ಕಾರದ 'ಆಪರೇಷನ್ ಸಿಂಧೂರ' ರಾಜತಾಂತ್ರಿಕ ಅಂತರರಾಷ್ಟ್ರೀಯ ಅಭಿಯಾನದ ಭಾಗವಾಗಿ, ಉಗ್ರವಾದ ವಿರುದ್ಧದ ಜಾಗತಿಕ ಬೆಂಬಲವನ್ನು ಬಲಪಡಿಸಲು ಮತ್ತು ಭಾರತದ ಶೂನ್ಯ ಸಹಿಷ್ಣುತೆ ನಿಲುವುವನ್ನು ವಿಶ್ವಕ್ಕೆ ತಿಳಿಸಲು ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವ ಸರ್ವಪಕ್ಷ ನಿಯೋಗವು ಬ್ರೆಜಿಲ್‌ಗೆ ಭೇಟಿ ನೀಡಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ಶಶಿ ತರೂರ್, "ಬ್ರೆಜಿಲ್ ಭಾರತದ ಪಾಲುದಾರ ರಾಷ್ಟ್ರವಾಗಿದ್ದು, ಒಕ್ಕೂಟದ ಅಂಗಸಂಸ್ಥೆಯೂ ಆಗಿದೆ. ಭಯೋತ್ಪಾದನೆ ಕುರಿತಾಗಿ ನಮ್ಮ ನಿಲುವು ಅವರಿಗೆ ಸ್ಪಷ್ಟವಾಗಿ ತಿಳಿಸುವುದು ಅಗತ್ಯ ಎಂದು ಹೇಳಿದರು.ನಾಳೆ

ಸಂಪೂರ್ಣ ದಿನದ ಸಭೆಗಳು ಈಗಾಗಲೇ ನಿಗದಿಯಾಗಿವೆ. ನಂತರ ಅಮೆರಿಕದ ವಾಷಿಂಗ್ಟನ್‌ಗೆ ತೆರಳುವುದಾಗಿ ಶಶಿ ತರೂರ್ ತಿಳಿಸಿದರು. ಶಿವಸೇನಾ ಸಂಸದ ಶ್ರೀಕಾಂತ್ ಶಿಂಧೆ ನೇತೃತ್ವದ ಸರ್ವಪಕ್ಷ ನಿಯೋಗವು ಲೈಬೀರಿಯಾದಲ್ಲಿದ್ದು, ಮನ್ರೋವಿಯಾದಲ್ಲಿ ಮೂರು ದಿನಗಳ ವಾಸ್ತವ್ಯದ ಅವಧಿಯಲ್ಲಿ, ನಿಯೋಗವು ಲೈಬೀರಿಯಾದ ಅಧ್ಯಕ್ಷ, ಪ್ರತಿನಿಧಿಗಳ ಸಭೆಯ ಸ್ಪೀಕರ್, ಸೆನೆಟ್‌ನ ತಾತ್ಕಾಲಿಕ ಅಧ್ಯಕ್ಷ, ವಿದೇಶಾಂಗ ವ್ಯವಹಾರಗಳ ಸಚಿವರು ಹಾಗೂ ಪ್ರಮುಖ ಚಿಂತಕರ ಚಾವಡಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳನ್ನು ಭೇಟಿ ಮಾಡಲಿದೆ. ಜೆಡಿಯು ಸಂಸದ ಸಂಜಯ್ ಕುಮಾರ್ ಝಾ ನೇತೃತ್ವದ ಸರ್ವಪಕ್ಷ ನಿಯೋಗವು, ಇಂಡೋನೇಷ್ಯಾಕ್ಕೆ ಯಶಸ್ವಿ ಭೇಟಿಯನ್ನು ಮುಗಿಸಿದ ನಂತರ ಇಂದು ಮಲೇಷ್ಯಾದ ಕೌಲಾಲಂಪುರ ತಲುಪಿತು. ನಿಯೋಗವು ಮಲೇಷ್ಯಾದ ಸಚಿವರು, ಸಂಸತ್ ಸದಸ್ಯರು, ಚಿಂತಕರ ಚಾವಡಿಗಳ ಪ್ರತಿನಿಧಿಗಳು, ಶೈಕ್ಷಣಿಕ, ಮಾಧ್ಯಮ ಮತ್ತು ಭಾರತೀಯ ಸಮುದಾಯದವರನ್ನು ಭೇಟಿ ಮಾಡಿ ಭಾರತದ ರಾಷ್ಟ್ರೀಯ ಒಮ್ಮತ ಮತ್ತು ಅಭಿವ್ಯಕ್ತಿಗಳಲ್ಲಿ ಭಯೋತ್ಪಾದನೆಯನ್ನು ಎದುರಿಸುವ ಸಾಮೂಹಿಕ ಸಂಕಲ್ಪವನ್ನು ತಿಳಿಸಲಿದೆ. ಅಲ್ಜೀರಿಯಾದಲ್ಲಿ, ಬಿಜೆಪಿ ಸಂಸದ ಬೈಜಯಂತ್ ಪಾಂಡಾ, ನೇತೃತ್ವದ ಸರ್ವಪಕ್ಷ ನಿಯೋಗವು ಅಲ್ಜೀರಿಯಾದ ಮಾಧ್ಯಮ, ಚಿಂತಕರ ಚಾವಡಿ ಸದಸ್ಯರು, ಭಾರತೀಯ ಸಮುದಾಯದೊಂದಿಗೆ ಭಯೋತ್ಪಾದನೆಯ ಜಾಗತಿಕ ಪಿಡುಗಿನ ಬಗ್ಗೆ ವಿವರಿಸಿತು. ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ನೇತೃತ್ವದ ಸಂಸದರ ನಿಯೋಗ ಲಂಡನ್ ತಲುಪಿದೆ. ಭಯೋತ್ಪಾದನೆಯನ್ನು ನಿಗ್ರಹಿಸಲು ಭಾರತದ ನಿಸ್ಸಂದಿಗ್ಧ ಬದ್ಧತೆಯನ್ನು ತಿಳಿಸುವ ಉದ್ದೇಶದಿಂದ ನಿಯೋಗವು ಈ ತಿಂಗಳ ೩ ನೇ ತಾರೀಖಿನವರೆಗೆ ಅಮೆರಿಕಾಗೆ ಭೇಟಿ ನೀಡಲಿದೆ. ತಮ್ಮ ವಾಸ್ತವ್ಯದ ಅವಧಿಯಲ್ಲಿ, ನಿಯೋಗವು ಹೌಸ್ ಆಫ್ ಕಾಮನ್ಸ್ ಸ್ಪೀಕರ್ ಲಿಂಡ್ಸೆ ಹೊಯ್ಲ್, ಬ್ರಿಟನ್ ಸಂಸತ್ತಿನ ಉಭಯ ಸದನಗಳ ಸದಸ್ಯರು ಮತ್ತು ಮಾಧ್ಯಮ, ಚಿಂತಕರ ಚಾವಡಿಗಳು ಮತ್ತು ಭಾರತೀಯ ಸಮುದಾಯದ ಪ್ರಮುಖ ಪ್ರತಿನಿಧಿಗಳನ್ನು ಭೇಟಿ ಮಾಡಲಿದೆ. ಡಿಎಂಕೆ ಸಂಸದೆ ಕೆ ಕನಿಮೋಳಿ ನೇತೃತ್ವದ ಸರ್ವಪಕ್ಷ ನಿಯೋಗವು ಮ್ಯಾಡ್ರಿಡ್ ತಲುಪಿದೆ. ಮುಂದಿನ ಎರಡು ದಿನಗಳಲ್ಲಿ, ನಿಯೋಗವು ಸ್ಪ್ಯಾನಿಷ್ ಸರ್ಕಾರದ ಸದಸ್ಯರು, ಭಾರತೀಯ ವಲಸಿಗರು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಭೇಟಿ ಮಾಡಿ ಭಯೋತ್ಪಾದನೆಯ ಬಗ್ಗೆ ಭಾರತದ ಶೂನ್ಯ ಸಹಿಷ್ಣುತೆಯ ನಿಲುವನ್ನು ಮಂಡಿಸಲಿದೆ.ಪ್ರಸ್ತುತ ಇಥಿಯೋಪಿಯಾಕ್ಕೆ ಭೇಟಿ ನೀಡಿರುವ ಎನ್‌ಸಿಪಿ-ಎಸ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ನೇತೃತ್ವದ ಸರ್ವಪಕ್ಷ ನಿಯೋಗವು, ಇಥಿಯೋಪಿಯಾದ ಉನ್ನತ ಶಾಸಕರು, ಗಣ್ಯರು ಮತ್ತು ಆಫ್ರಿಕನ್ ಯೂನಿಯನ್ ಆಯೋಗದೊಂದಿಗೆ ಸಂವಾದ ಮತ್ತು ಚರ್ಚೆಗಳನ್ನು ನಡೆಸಿತು.

***************

ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯಿಂದ ವಿಚಲಿತರಾಗದೆ, ಜಮ್ಮು ಮತ್ತು ಕಾಶ್ಮೀರದ ಗಾಂದೇರ್ಬಾಲ್ ಜಿಲ್ಲೆ ನಡೆಯುತ್ತಿರುವ ಪವಿತ್ರ ವಾರ್ಷಿಕ ಮಾತಾ ಖೀರ್ ಭವಾನಿ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಿಕರು ಆಗಮಿಸುತ್ತಿದ್ದಾರೆ.ಭಾರತೀಯ ಸಶಸ್ತ್ರ ಪಡೆಗಳ ಮೇಲಿನ ಅಚಲ ನಂಬಿಕೆಯೊಂದಿಗೆ, ವಿಶೇಷವಾಗಿ ಕಾಶ್ಮೀರಿ ಪಂಡಿತ ಸಮುದಾಯದ ಭಕ್ತರು, ಜೂನ್ ೩ ರಂದು ಐತಿಹಾಸಿಕ ರಾಗ್ನ್ಯಾ ದೇವಿಯ ದೇವಾಲಯದಲ್ಲಿ ಪವಿತ್ರ ಹಬ್ಬಗಳಲ್ಲಿ ಒಂದಾದ ಈ ಹಬ್ಬವನ್ನು ಆಚರಿಸಲು ತಯಾರಿ ನಡೆಸುತ್ತಿದ್ದಾರೆ.ಭಕ್ತರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರದೇಶದಾದ್ಯಂತ ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.ಈ ನಡುವೆ, ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಐಜಿಪಿ, ಜಿಲ್ಲಾಧಿಕಾರಿ ಸೇರಿದಂತೆ ಉನ್ನತ ಅಧಿಕಾರಿಗಳು ಜಮ್ಮುವಿನಲ್ಲಿ ಮಾತಾ ಖೀರ್ ಭವಾನಿ ಯಾತ್ರೆಗೆ ಚಾಲನೆ ನೀಡಿದರು.

***************

ಸೇನೆಯಲ್ಲಿ ಸುಧಾರಣೆಗೆ ವೇಗ ನೀಡಲು ರಕ್ಷಣಾ ಸಚಿವಾಲಯ ಶಸ್ತ್ರಾಸ್ತ್ರ ಖರೀದಿ ಪ್ರಕ್ರಿಯೆಯ ಅವಧಿಯನ್ನು ಕಡಿಮೆ ಮಾಡಲು ಹಲವಾರು ಕ್ರಮಗಳನ್ನು ಆರಂಭಿಸಿದೆ. ಪ್ರಸ್ತುತ ಅವಶ್ಯಕತೆಗಳಿಗೆ ಅನುಗಣವಾಗಿ ೨೦೨೦ರ ಖರೀದಿ ನಿಯಮಗಳಿಗೆ ಬದಲಾವಣೆಗಳನ್ನು ತಂದು ಪುನರ್ ವಿಮರ್ಶೆ ಮಾಡಲಾಗುತ್ತಿದ್ದು, ಈ ಕ್ರಮದಿಂದಾಗಿ ಖರೀದಿ ಪ್ರಕ್ರಿಯೆಯ ಸುಮಾರು ೬೯ ವಾರಗಳ ಕಾಲಾವಧಿ ಉಳಿತಾಯವಾಗಲಿದೆ ಎಂದು ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ರಕ್ಷಣಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಖರೀದಿ ಚಕ್ರದಲ್ಲಿನ ಕೆಲವು ಪ್ರಕ್ರಿಯೆಗಳಿಗೆ ಸಚಿವಾಲಯವು ಈಗಾಗಲೇ ಸಮಯವನ್ನು ಕಡಿತಗೊಳಿಸಿದೆ ಎಂದು ಹೇಳಿದರು.

***************

ಮುಂಗಾರು ಋತು ಸಮೀಪಿಸುತ್ತಿರುವಂತೆ ನಗರದಲ್ಲಿ ನೀರು ನುಗ್ಗುವ ಅಪಾಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಬೆಂಗಳೂರು ನಗರದಲ್ಲಿ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ ಹೆಚ್ ಎ ಆರ್ ಡಿ ಅಭ್ಯಾಸ ನಡೆಸಲಾಯಿತು. ಈ ಅಭ್ಯಾಸ ವಿವಿಧ ಸಂಸ್ಥೆಗಳ ಸಮಯೋಜಿತ ಪ್ರತಿಕ್ರಿಯೆಗಾಗಿ ಸಿದ್ಧತೆಯನ್ನು ಬಲಪಡಿಸಲು ಉದ್ದೇಶಿತವಾಗಿತ್ತು.ಈ ಅಭ್ಯಾಸದ ನೇತೃತ್ವವನ್ನು ಬೈಸನ್ ಡಿವಿಷನ್‌ನ ಅಧೀನದಲ್ಲಿರುವ ಆಂಫಿಬಿಯಸ್ ಬ್ರಿಗೇಡ್‌ನ ಗೋರ್ಖಾ ಬ್ಯಾಟಾಲಿಯನ್ ನೇತೃತ್ವ ವಹಿಸಿತ್ತು. ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ಪಡೆ- ಎನ್ ಡಿಆರ್ ಎಫ್, ರಾಜ್ಯ ವಿಪತ್ತು ಪ್ರತಿಕ್ರಿಯಾ ಪಡೆ ಎಸ್ ಡಿಆರ್ ಎಫ್, ರಾಜ್ಯ ತುರ್ತು ಸೇವೆಗಳು ಮತ್ತು ಸ್ಥಳೀಯ ನಾಗರಿಕ ಅಧಿಕಾರಿಗಳು ಅಣಕು ಅಭ್ಯಾಸದಲ್ಲಿ ಭಾಗಿಯಾದರು.ಜಯನಗರ ಅಗ್ನಿಶಾಮಕ ಕೇಂದ್ರದಲ್ಲಿ ಕಟ್ಟಡ ತೆರವುಗೊಳಿಸುವ ಅಭ್ಯಾಸ ಹಾಗೂ ಹಲಸೂರು ಕೆರೆಯ ಬಳಿ ಪ್ರವಾಹ ನಿರ್ವಹಣಾ ಅಭ್ಯಾಸ ನಡೆಯಿತು, ಇದು ಮುಂಗಾರು ಸಂದರ್ಭದಲ್ಲಿ ಸಂಭವಿಸಬಹುದಾದ ನೀರು ಆಧಾರಿತ ತುರ್ತು ಪರಿಸ್ಥಿತಿಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಒಳಗೊಂಡಿತ್ತು.

***************

ಬಂದರುಗಳು, ನೌಕಾಯಾನ ಮತ್ತು ಜಲಮಾರ್ಗಗಳ ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್, ನಾಳೆಯಿಂದ ನಾರ್ವೆ ಮತ್ತು ಡೆನ್ಮಾರ್ಕ್‌ಗೆ ಐದು ದಿನಗಳ ಅಧಿಕೃತ ಭೇಟಿಗೆ ಪ್ರಯಾಣ ಬೆಳೆಸಲಿದ್ದಾರೆ. ನಾರ್ವೆ ರಾಜಧಾನಿಯಾದ ಒಸ್ಲೋದಲ್ಲಿ ನಡೆಯುತ್ತಿರುವ ೬೦ನೇ ಆವೃತ್ತಿಯ ನಾರ್-ಶಿಪಿಂಗ್ ಕಾರ್ಯಕ್ರಮದ ಸಂದರ್ಭದಲ್ಲಿ, ಅವರು ಮಹಾಸಾಗರಗಳ ಕುರಿತ ಉನ್ನತ ಮಟ್ಟದ ಸಭೆಯಲ್ಲಿ ಭಾಗವಹಿಸಲಿದ್ದಾರೆ ಮತ್ತು ಮೊದಲ 'ಇಂಡಿಯಾ ಪೆವಿಲಿಯನ್' ಉದ್ಘಾಟಿಸಲಿದ್ದಾರೆ.ಈ 'ಇಂಡಿಯಾ ಪೆವಿಲಿಯನ್'ನಲ್ಲಿ' ರಾಷ್ಟ್ರೀಯ ಸಮುದ್ರ ಪರಂಪರೆ ಸಂಕೀರ್ಣವನ್ನೊಳಗೊಂಡು ಭಾರತದ ಐದು ಸಾವಿರ ವರ್ಷದ ನೌಕಾಯಾನ ಪರಂಪರೆ ಮತ್ತು ಜಾಗತಿಕ ಸಂಪರ್ಕಗಳ ಬಗ್ಗೆ ಅಂತರಾಷ್ಟ್ರೀಯ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಡೆನ್ಮಾರ್ಕ್‌ನಲ್ಲಿ, ಅವರು ಕೊಪೆನ್‌ಹೇಗನ್ ಬಿಸಿನೆಸ್ ಸ್ಕೂಲ್‌ನ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದು, ಭಾರತದ ವೇಗದ ಆರ್ಥಿಕ ಬೆಳವಣಿಗೆ ಸಂದರ್ಭದಲ್ಲಿರುವ ಅವಕಾಶಗಳ ಬಗ್ಗೆ ಚರ್ಚಿಸಲಿದ್ದಾರೆ.

***************

ಎರಡು ದಿನಗಳ ಪಶ್ಚಿಮ ಬಂಗಾಳ ಭೇಟಿಯಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಕೋಲ್ಕತ್ತಾದ ನ್ಯೂ ಟೌನ್‌ನಲ್ಲಿರುವ ಕೇಂದ್ರ ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ ನೂತನ ಕಟ್ಟಡವನ್ನು ಇಂದು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೋಲ್ಕತ್ತಾದಲ್ಲಿರುವ ಹೊಸ ಸಿಎಫ್‌ಎಸ್‌ಎಲ್ ಪ್ರಯೋಗಾಲಯವು ಪೂರ್ವ ಮತ್ತು ಈಶಾನ್ಯ ಭಾರತದಲ್ಲಿನ ಸಂಕೀರ್ಣ ಪ್ರಕರಣಗಳಿಗೆ ಸಮಗ್ರ ವಿಧಾನವನ್ನು ಬೆಂಬಲಿಸುತ್ತದೆ ಎಂದು ಹೇಳಿದರು.

***************

ತೈವಾನ್ ಚೀನಾದಿಂದ ಸನ್ನಿಹಿತ ಬೆದರಿಕೆಯನ್ನು ಎದುರಿಸುತ್ತಿದೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಎಚ್ಚರಿಸಿದ್ದಾರೆ. ಸಿಂಗಾಪುರದಲ್ಲಿ ನಡೆದ ಶಾಂಗ್ರಿ-ಲಾ ಸಂವಾದದಲ್ಲಿ ಮಾತನಾಡಿದ ಹೆಗ್ಸೆತ್, ಏಷ್ಯಾದ ಹಲವು ಭಾಗಗಳಲ್ಲಿ ಪ್ರಾಬಲ್ಯ ಸಾಧಿಸಲು ಮತ್ತು ನಿಯಂತ್ರಿಸಲು ಚೀನಾವು ಪ್ರಾಬಲ್ಯದ ಶಕ್ತಿಯಾಗಲು ಪ್ರಯತ್ನಿಸುತ್ತಿದೆ ಎಂದು ಎಚ್ಚರಿಸಿದ್ದಾರೆ.

***************

ಜಮ್ಮು ಮತ್ತು ಕಾಶ್ಮೀರದಲ್ಲಿ, ಜಮ್ಮು ವಿಭಾಗದ ಬೇಸಿಗೆ ವಲಯ ಪ್ರದೇಶಗಳಲ್ಲಿ ಬರುವ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದ ಖಾಸಗಿ ಶಾಲೆಗಳಿಗೆ ಬೇಸಿಗೆ ರಜೆಯನ್ನು ಜಮ್ಮು ಶಾಲಾ ಶಿಕ್ಷಣ ನಿರ್ದೇಶನಾಲಯ ಘೋಷಿಸಿದೆ. ಜೂನ್ ೭ ರಿಂದ ಜುಲೈ ೧೭ ರವರೆಗೆ ರಜೆ ನೀಡಲಾಗಿದೆ.

***************

ಅಹಮಬಾದ್‌ಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ೨ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಪ್ರಾರಂಭವಾಗಲಿದೆ. ಈ ಪಂದ್ಯದಲ್ಲಿ ಗೆಲ್ಲುವ ತಂಡ ಜೂನ್ ೩ರಂದು ನಡೆಯುವ ಫೈನಲ್ ಪಂದ್ಯದಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

***************

ಫ್ರೆಂಚ್ ಓಪನ್ ಟೆನಿಸ್‌ನಲ್ಲಿ, ನೊವಾಕ್ ಜೊಕೊವಿಕ್ ಮತ್ತು ವಿಶ್ವದ ನಂ.೧ ಜಾನಿಕ್ ಸಿನ್ನರ್ ನಿನ್ನೆ ರಾತ್ರಿ ನೇರ ಸೆಟ್‌ಗಳ ಗೆಲುವಿನೊಂದಿಗೆ ನಾಲ್ಕನೇ ಸುತ್ತಿಗೆ ಪ್ರವೇಶಿಸಿದ್ದಾರೆ. ಮುಂದಿನ ಪಂದ್ಯದಲ್ಲಿ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಬ್ರಿಟನ್‌ನ ಕ್ಯಾಮರೂನ್ ನಾರ್ರಿಯನ್ನು ಎದುರಿಸಲಿದ್ದಾರೆ. ಇಂದಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್, ಬೆನ್ ಶೆಲ್ಟನ್ ಅವರನ್ನು ಎದುರಿಸಲಿದ್ದಾರೆ.

***************

ಇಂದಿನಿಂದ ತೈಲ ಕಂಪನಿಗಳು ೧೯ ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ೨೪ ರೂಪಾಯಿಗಳಷ್ಟು ಇಳಿಕೆ ಮಾಡಿದೆ. ಈ ಸಿಲಿಂಡರ್‌ಗಳ ಪರಿಷ್ಕೃತ ಚಿಲ್ಲರೆ ಬೆಲೆ ಈಗ ದೆಹಲಿಯಲ್ಲಿ ೧ ಸಾವಿರದ ೭೨೩ ರೂಪಾಯಿ ೫೦ ಪೈಸೆಯಷ್ಟಾಗಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ. ಈ ವರ್ಷದ ಆರಂಭದಲ್ಲಿ ಏಪ್ರಿಲ್‌ನಲ್ಲಿ, ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ೪೧ ರೂಪಾಯಿಗಳಷ್ಟು ಕಡಿಮೆ ಮಾಡಲಾಗಿತ್ತು.

***************

'ಆಪರೇಷನ್ ಸಿಂಧೂರ್' ಭಯೋತ್ಪಾದನೆ ವಿರುದ್ಧ ಭಾರತದ ನೀತಿಯನ್ನು ಮರು ವ್ಯಾಖ್ಯಾನಿಸುವುದು' ಎಂಬ ದ್ವಿಭಾಷಾ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಲು ಕೇಂದ್ರ ಸರ್ಕಾರ ಯುವ ಸಮೂಹವನ್ನು ಆಹ್ವಾನಿಸಿದೆ. ಅಗ್ರ ಮೂರು ವಿಜೇತರು ತಲಾ ಹತ್ತು ಸಾವಿರ ರೂಪಾಯಿ ನಗದು ಬಹುಮಾನವನ್ನು ಪಡೆಯಲಿದ್ದಾರೆ. ನವದೆಹಲಿಯ ಕೆಂಪು ಕೋಟೆಯಲ್ಲಿ ನಡೆಯುವ ೭೯ ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ವಿಶೇಷ ಅವಕಾಶವನ್ನು ಪಡೆಯುತ್ತಾರೆ. ಈ ಸ್ಪರ್ಧೆಯನ್ನು ರಕ್ಷಣಾ ಸಚಿವಾಲಯ ಮತ್ತು ಒಜ ಉಔಗಿ ಇಂಡಿಯಾ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಆಸಕ್ತರು ಸ್ಪರ್ಧೆಯಲ್ಲಿ ಭಾಗವಹಿಸಲು ಒಜ ಉಔಗಿ ನ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಸ್ಪರ್ಧೆಯು ಇಂದಿನಿಂದ ಈ ತಿಂಗಳ ೩೦ ರವರೆಗೆ ತೆರೆದಿರುತ್ತದೆ. ಆಸಕ್ತ ಭಾಗವಹಿಸುವವರು ತಮ್ಮ ಸಾಮಾಜಿಕ ಮಾಧ್ಯಮ ಪುಟಗಳಲ್ಲಿ #ಓeತಿIಟಿಜiಚಿ #ಇmಔoತಿeಡಿeಜIಟಿಜiಚಿ ಮತ್ತು #iಟಿಜeಔeಟಿಜeಟಿಛಿeಜಚಿಥಿ೨೦೨೫ ಎಂಬ ಹ್ಯಾಶ್‌ಟ್ಯಾಗ್‌ಗಳೊಂದಿಗೆ ರೀಲ್‌ಗಳು ಮತ್ತು ವೀಡಿಯೊಗಳನ್ನು ಪೋಸ್ಟ್ ಮಾಡಬೇಕಾಗುತ್ತದೆ.

***************

ಅರ್ಜೆಂಟಿನಾದ ರೊಸಾರೊಯೋದಲ್ಲಿ ನಡೆಯುತ್ತಿರುವ ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯ ಐದನೇ ಪಂದ್ಯದಲ್ಲಿ ಭಾರತದ ಮಹಿಳಾ ಕಿರಿಯರ ತಂಡ ಉರುಗ್ವೆ ವಿರುದ್ಧ ೨-೨ ಡ್ರಾ ಸಾಧಿಸಿದ ಬಳಿಕ ನಡೆದ ಶೂಟ್ ಔಟ್ ನಲ್ಲಿ ೩-೧ ಅಂತರದಿಂದ ಗೆಲುವು ಸಾಧಿಸಿದೆ. ಪಂದ್ಯದಲ್ಲಿ ಮೊದಲಿಗೆ ಭಾರತ ತಂಡ ಮುನ್ನಡೆ ಸಾಧಿಸಿತ್ತಾದರೂ, ಉರುಗ್ವೆ ಅಂತಿಮ ಹಂತದಲ್ಲಿ ಸಮಬಲ ಸಾಧಿಸಿತು,ಭಾರತ ಇತ್ತೀಚೆಗೆ ಚಿಲಿ ವಿರುದ್ಧದ ತನ್ನ ನಾಲ್ಕನೇ ಪಂದ್ಯದಲ್ಲಿ ಸೋಲು ಅನುಭವಿಸಿತ್ತು. ಆದರೆ ಚಿಲಿ ವಿರುದ್ಧದ ತನ್ನ ಮೊದಲ ಪಂದ್ಯದಲ್ಲಿ, ಉರುಗ್ವೆ ವಿರುದ್ಧದ ಎರಡನೇ ಪಂದ್ಯದಲ್ಲಿ ಹಾಗೂ ಅರ್ಜೆಂಟೀನಾ ವಿರುದ್ಧದ ಮೂರನೇ ಪಂದ್ಯದಲ್ಲಿ ಭಾರತ ಗೆಲುವು ದಾಖಲಿಸಿದೆ.

***************

ಅಖಿಲ ಭಾರತೀಯ ಫುಟ್‌ಬಾಲ್ ಒಕ್ಕೂಟ - ಎಐಎಫ್‌ಎಫ್ ತನ್ನ ಆಟಗಾರರ ಸ್ಥಾನಮಾನ ಮತ್ತು ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ಮಾಡಿಕೊಂಡಿದೆ. ಈ ತಿದ್ದುಪಡಿಗಳು ಇಂದಿನಿಂದ ಜಾರಿಗೆ ಬರಲಿವೆ. ಈ ಸುಧಾರಣೆಗಳು ಆಟಗಾರರ ಕಲ್ಯಾಣವನ್ನು ಉತ್ತಮಗೊಳಿಸುವ, ಮಹಿಳಾ ಮತ್ತು ಯುವ ಫುಟ್‌ಬಾಲ್‌ಗೆ ಹೆಚ್ಚಿನ ಬೆಂಬಲ ನೀಡುವ ಮತ್ತು ಫಿಫಾ ಮಾನದಂಡಗಳ ಅನುಸರಣೆಯಂತೆ ನಿಯಮಗಳಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸುವ ಗುರಿ ಹೊಂದಿವೆ.

***************

ಫ್ರೆಂಚ್ ಫುಟ್ ಬಾಲ್ ಕ್ಲಬ್ ಪ್ಯಾರಿಸ್ ಸ್ಯಾಂಟ್-ಜೆರ್ಮೆನ್ ಪಿಎಸ್‌ಜಿ, ಇಟಲಿಯ ಇಂಟರ್ ಮಿಲಾನ್ ವಿರುದ್ಧ ೫-೦ ಅಂತರದ ಭರ್ಜರಿ ಗೆಲುವಿನೊಂದಿಗೆ ತನ್ನ ಮೊದಲ ಯುಇಎಫ್ ಎ ಚಾಂಪಿಯನ್ಸ್ ಲೀಗ್ ಕಿರೀಟ ಗೆದ್ದು ಇತಿಹಾಸ ನಿರ್ಮಿಸಿದೆ. ಜರ್ಮನಿಯ ಮ್ಯುನಿಚ್ ನಲ್ಲಿ ನಡೆದ ಅಂತಿಮ ಪಂದ್ಯದ ಗೆಲುವಿನೊಂದಿಗೆ ಪಿಎಸ್ ಜಿ  ಅವರು ಲೀಗ್ ವನ್, ಕೂಪ್ ಡಿ ಫ್ರಾನ್ಸ್ ಹಾಗೂ ಚಾಂಪಿಯನ್ಸ್ ಲೀಗ್ ಮೂರು ಟ್ರೋಫಿ ಗೆದ್ದು ಇತಿಹಾಸ ನಿರ್ಮಿಸಿದೆ. ೧೯ ವರ್ಷದ ಡೆಸೈರ್ ಡೋಯೆ ಎರಡು ಗೋಲು ಸಿಡಿಸಿ ಉತ್ತಮ ಪ್ರದರ್ಶನ ನೀಡಿದರು.